ಕರ್ನಾಟಕಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/23/ಇಎಸ್‌ಟಿ(14)/2023 /3349

ಆಯುಕ್ತರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ
ಬೆಂಗಳೂರು- 560001
ದಿನಾಂಕ: 16.12.2024

ಇವರಿಗೆ,

ಪ್ರಾಂಶುಪಾಲರು,
ರೂರಲ್ ಪಾಲಿಟೆಕ್ನಿಕ್,
ಹುಲಿಕೋಟಿ.

ಮಾನ್ಯರೆ,

ವಿಷಯ: ಶ್ರೀ ಶಂಕ್ರಪ್ಪ ಮಲ್ಲಿಗವಾಡ, ಸಹಾಯಕರು, ಟೆಕ್ಸ್‌ಟೈಲ್ ಟೆಕ್ನಾಲಜಿ ವಿಭಾಗ, ಇವರಿಗೆ ಸದರಿ ವಿಭಾಗದಲ್ಲಿ ಖಾಲಿ ಇರುವ ಮೆಕ್ಯಾನಿಕ್ ಹುದ್ದೆಗೆ ಮುಂಬಡ್ತಿ ನೀಡಲು ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ: ಇಡಿ 223 ಟಿಇಸಿ 2018 ದಿನಾಂಕ:27.08.2020
   ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ; ಸಿಆಸುಇ/106/ಸನೆನಿ 2021 ದಿನಾಂಕ: 10.12.2021
3. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/02/ಸೆಹಿಮ/2022, ದಿ :28.12.2022
4. ನಿಮ್ಮ ಪತ್ರ ಸಂಖ್ಯೆ: ಆರ್‌ಪಿಟಿ/ಎಡಿಎಂ/379/2022, ದಿ: 20.07.2022, 12.04.2023, 16.08.2023 ಮತ್ತು 25.09.2023

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (4) ರ ಪತ್ರಗಳಲ್ಲಿ ನಿಮ್ಮ ಸಂಸ್ಥೆಯಲ್ಲಿ ವೇತನಾನುದಾನದಡಿ ಅನುಮೋದನೆಗೊಂಡು ಕಾರ್ಯ ನಿರ್ವಹಿಸುತ್ತಿರುವ ಶ್ರೀ ಶಂಕ್ರಪ್ಪ ಮಲ್ಲಿಗವಾಡ, ಸಹಾಯಕರು, ಟೆಕ್ಸ್‌ಟೈಲ್ ಟೆಕ್ನಾಲಜಿ ವಿಭಾಗ, ಇವರಿಗೆ ಸದರಿ ವಿಭಾಗದಲ್ಲಿ ಖಾಲಿ ಇರುವ ಮೆಕ್ಯಾನಿಕ್ ಹುದ್ದೆಗೆ ಮುಂಬಡ್ತಿ ನೀಡಲು ಅನುಮೋದಿಸುವಂತೆ ಕೋರಿರುತ್ತೀರಿ.

ಈ ಬಗ್ಗೆ ಪರಿಶೀಲಿಸಲಾಗಿ, ಶ್ರೀ ಶಂಕ್ರಪ್ಪ ಮಲ್ಲಿಗವಾಡ ಇವರ ವಿರುದ್ಧ ಯಾವುದೇ ನ್ಯಾಯಾಲಯ ಪ್ರಕರಣಗಳು, ಇಲಾಖಾ ವಿಚಾರಣೆಗಳು ಬಾಕಿ ಇರುವುದಿಲ್ಲವೆಂದು, ಸದರಿಯವರಿಗೆ ಸಂಬಂಧಿಸಿದಂತೆ ಮಹಾಲೇಖಪಾಲರು/ಇಲಾಖಾ ಲೆಕ್ಕತಪಾಸಣಾ ವರದಿಗಳಲ್ಲಿ ಯಾವುದೇ ಆಕ್ಷೇಪಣಾ ಖಂಡಿಕೆಗಳು ಬಾಕಿ ಇರುವುದಿಲ್ಲವೆಂದೂ, ಇವರಿಂದ ಸರ್ಕಾರಕ್ಕೆ ಯಾವುದೇ ಬಾಕಿ ಬರಬೇಕಾಗಿಲ್ಲವೆಂದೂ, ಸದರಿಯವರು ಈ ಹಿಂದೆ ಮುಂಬಡ್ತಿಯನ್ನು ನಿರಾಕರಿಸಿರುವುದಿಲ್ಲವೆಂದೂ ದೃಢೀಕರಿಸಿರುತ್ತೀರಿ. ಹಾಗೂ ಸದರಿಯವರ ಮುಂಬಡ್ತಿಗೆ ಆಡಳಿತ ಮಂಡಳಿಯು ಒಪ್ಪಿಗೆ ನೀಡಿರುತ್ತದೆ.

ಶ್ರೀ ಶಂಕ್ರಪ್ಪ ಮಲ್ಲಿಗವಾಡ ಇವರ ಸೇವಾ ವಿವರಗಳನ್ನು ಪರಿಶೀಲಿಸಲಾಗಿ, ಸದರಿಯವರು ಪ್ರಸ್ತುತ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮುಂಬಡ್ತಿ ಹುದ್ದೆಯಾದ ಮೆಕ್ಯಾನಿಕ್ ಹುದ್ದೆಗೆ ನಿಗದಿತ ವಿದ್ಯಾರ್ಹತೆ/ಸೇವಾನುಭವವನ್ನು ಹೊಂದಿರುತ್ತಾರೆ. ಸಂಸ್ಥೆಯ ಟೆಕ್ಸ್‌ಟೈಲ್ ಟೆಕ್ನಾಲಜಿ ವಿಭಾಗದ ಮೆಕ್ಯಾನಿಕ್ ವೃಂದದಲ್ಲಿ 02 ಹುದ್ದೆಗಳು ಮಂಜೂರಾಗಿದ್ದು, ಎರಡೂ ಹುದ್ದೆಗಳು ಖಾಲಿಯಿರುತ್ತವೆ. ಮುಂದುವರೆದು, ಪೋಷಕ ವೃಂದವಾದ ಸಹಾಯಕರ ವೃಂದದ ಜ್ಯೇಷ್ಠತಾ ಪಟ್ಟಿಯಲ್ಲಿ ಶ್ರೀ ಶಂಕ್ರಪ್ಪ ಮಲ್ಲಿಗವಾಡ ಇವರು ಹಿರಿಯರಾಗಿರುವುದನ್ನು ಪರಿಶೀಲಿಸಲಾಗಿದ್ದು, ಮುಂಬಡ್ತಿಗೆ ಸಂಬಂಧಿಸಿದಂತೆ ಸದರಿಯವರ ವಿವರಗಳು ಕೆಳಕಂಡಂತಿರುತ್ತವೆ.

...2

| ಸಿಬ್ಬಂದಿಯ ಹೆಸರು ಮತ್ತು ಮೀಸಲಾತಿ ವರ್ಗ | ಕಾರ್ಯ ನಿರ್ವಹಿಸುತ್ತಿರುವ ಹುದ್ದೆ ಮತ್ತು ಅನುದಾನಕ್ಕೆ ಒಳಪಟ್ಟ ದಿನಾಂಕ | ಮುಂಬಡ್ತಿ ಹುದ್ದೆ | ರಿಕ್ತಸ್ಥಾನ ವಹಿಯನ್ವಯ ಮುಂಬಡ್ತಿಗೆ ಪರಿಗಣಿಸಲಾದ ರೋಸ್ಟರ್ ಬಿಂದು/ ಮೀಸಲಾತಿ | ಷರಾ |
|---|---|---|---|---|
| (1) | (2) | (3) | (4) | (5) |
| ಶ್ರೀ ಶಂಕ್ರಪ್ಪ ಮಲ್ಲಿಗವಾಡ<br><br>ಸಾ.ಅ. | ಸಹಾಯಕರು, ಜವಳಿ ತಂತ್ರಜ್ಞಾನ ವಿಭಾಗ 05.02.2001 | ಮೆಕ್ಯಾನಿಕ್, ಜವಳಿ ತಂತ್ರಜ್ಞಾನ ವಿಭಾಗ | 01 ನೇ ಬಿಂದು ಪ.ಜಾ. | ಪೋಷಕ ವೃಂದವಾದ ಹೆಲ್ಪರ್ ವೃಂದದಲ್ಲಿ ಪ.ಜಾತಿಗೆ ಸೇರಿದ ಅಭ್ಯರ್ಥಿ ಲಭ್ಯವಿಲ್ಲದ ಕಾರಣ ಈ ವೃಂದದ ಜ್ಯೇಷ್ಠತಾ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ರುವ ಶ್ರೀ ಶಂಕ್ರಪ್ಪ ಮಲ್ಲಿಗವಾಡ ಇವರನ್ನು ಮುಂಬಡ್ತಿಗೆ ಪರಿಗಣಿಸಿದ್ದು, ಪ.ಜಾತಿಗೆ ಕೊರತೆ ಬೀಳುವ ಬಿಂದುವನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಿ ಭವಿಷ್ಯದಲ್ಲಿ ಪ.ಜಾತಿ ಅಭ್ಯರ್ಥಿಯಿಂದ ಭರ್ತಿ ಮಾಡಿ ಕೊರತೆಯನ್ನು ಸರಿದೂಗಿಸತಕ್ಕದ್ದು. |

ಶ್ರೀ ಶಂಕ್ರಪ್ಪ ಮಲ್ಲಿಗವಾಡ, ಸಹಾಯಕರು, ಟೆಕ್ಸ್‌ಟೈಲ್ ಟೆಕ್ನಾಲಜಿ ವಿಭಾಗ, ಇವರಿಗೆ ಕೆಳಕಂಡ ಷರತ್ತುಗಳಿಗೊಳಪಟ್ಟು ಉಲ್ಲೇಖ (1) ರ ಸರ್ಕಾರದ ಪತ್ರದನ್ವಯ ಪ್ರದತ್ತವಾದ ಅಧಿಕಾರ ಪ್ರತ್ಯಾಯೋಜನೆಯಂತೆ ಮೇಲ್ಕಂಡ ಕೋಷ್ಟಕದ ಕಾಲಂ 03 ರ ಮೆಕ್ಯಾನಿಕ್ ಹುದ್ದೆಗೆ ಮುಂಬಡ್ತಿ ನೀಡಲು ಅನುಮೋದಿಸಲಾಗಿದೆ.

**ಷರತ್ತುಗಳು:**

1. ಸದರಿ ಮುಂಬಡ್ತಿ ಅನುಮೋದನೆಯನ್ವಯ ಆಡಳಿತ ಮಂಡಳಿಯಿಂದ ಮುಂಬಡ್ತಿ ಆದೇಶ ಪಡೆದು ನಂತರ ಮುಂಬಡ್ತಿ ಹುದ್ದೆಯಲ್ಲಿ ಕಾರ್ಯವರದಿ ಮಾಡಿಕೊಳ್ಳತಕ್ಕದ್ದು.
2. ಕ್ರಮ ಸಂಖ್ಯೆ:1 ರ ಷರತ್ತಿನಂತೆ ಈ ಅನುಮೋದನೆಯನ್ವಯ ಆಡಳಿತ ಮಂಡಳಿಯಿಂದ ಮುಂಬಡ್ತಿ ಆದೇಶ ಜಾರಿಯಾದ ನಂತರ ಸಿಬ್ಬಂದಿಯು ಮುಂಬಡ್ತಿ ಹುದ್ದೆಗೆ ಕಾರ್ಯವರದಿ ಮಾಡುವ ದಿನಾಂಕದಿಂದ ಈ ಮುಂಬಡ್ತಿಯು ಜಾರಿಗೆ ಬರುತ್ತದೆ.
3. ಮುಂಬಡ್ತಿ ಹುದ್ದೆಗೆ ಕಾರ್ಯವರದಿ ಮಾಡಿಕೊಳ್ಳುವ ದಿನಾಂಕದಿಂದ ಮಾತ್ರ ಆರ್ಥಿಕ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ.
4. ಸಂಸ್ಥೆಯ ರಿಕ್ತ ಸ್ಥಾನ ವಹಿ ನಿರ್ವಹಿಸುವ, ಸಿಬ್ಬಂದಿಯ ಸೇವಾ ಪುಸ್ತಕ, ಮತ್ತು ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸುವ ಮತ್ತು ಪ್ರಕಟಿಸುವ ಸಂಪೂರ್ಣ ಜವಾಬ್ದಾರಿಯು ನೇಮಕಾತಿ ಪ್ರಾಧಿಕಾರವಾದ ಆಡಳಿತ ಮಂಡಳಿಯಾಗಿರುವುದರಿಂದ ಈ ಮುಂಬಡ್ತಿ ಅನುಮೋದನೆಗೆ ಯಾವುದೇ ತಪ್ಪು/ಸುಳ್ಳು ಮಾಹಿತಿ/ದಾಖಲೆಗಳನ್ನು ಸಲ್ಲಿಸಿರುವುದು ಅಥವಾ ಸರ್ಕಾರದ ಆದೇಶ/ನಿಯಮಾನುಸಾರ ಇಲ್ಲದಿರುವುದು ಭವಿಷ್ಯದಲ್ಲಿ ಕಂಡುಬಂದಲ್ಲಿ ಅದಕ್ಕೆ ಸಂಸ್ಥೆಯ ಪ್ರಾಂಶುಪಾಲರು ಮತ್ತು ಆಡಳಿತ ಮಂಡಳಿ ಸಂಪೂರ್ಣ ಹೊಣೆಗಾರರಾಗಿರುತ್ತಾರೆ ಹಾಗೂ ಈ

ಅನುಮೋದನೆಯನ್ನು ಹಿಂಪಡೆಯುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರವಾದ "**ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**" ರವರು ಹೊಂದಿರುತ್ತಾರೆ.

5. ಈ ಮುಂಬಡ್ತಿಯನ್ನು ಮಹಾಲೇಖಪಾಲರು/ಇಲಾಖಾ ಲೆಕ್ಕ ತಪಾಸಣಾ ಪರಿಶೀಲನೆಗೆ ಒಳಪಡತಕ್ಕದ್ದು.
6. ಮುಂಬಡ್ತಿ ಅನುಮೋದನೆಗೆ ಸಂಬಂಧಿಸಿದಂತೆ ಸುಳ್ಳು/ತಪ್ಪು ದೃಢೀಕರಣ/ಮಾಹಿತಿ ನೀಡಿದ್ದಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

**"ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"**

**ತಮ್ಮ ವಿಶ್ವಾಸಿ,**

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**

ಪ್ರತಿ (ಮಾಹಿತಿಗಾಗಿ):

1. ಹೆಚ್.ಆರ್.ಎಂ.ಎಸ್. ವಿಭಾಗ, ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ.
2. ಜಿ.ಆರ್.ಟಿ. (2) ವಿಭಾಗ, ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ.